**Code No. 18 X**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ — ಪ್ರೌಢ ದರ್ಜೆ — ಪ್ರಥಮ ಪತ್ರಿಕೆ

## (ವೇಗ)

ಜೂನ್, 2016

ವೇಳೆ { ಉಕ್ತಲೇಖನ : 10 ನಿಮಿಷಗಳು
ವಿಸ್ತರಣೆ : 2 ಗಂಟೆಗಳು

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಇನ್ನೂರ ಅರವತ್ತು (260) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.

2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳಿಗೆ ಶೀಘ್ರಲಿಪಿ ಟಿಪ್ಪಣಿಯನ್ನು ನಿಗದಿಪಡಿಸಿದ ಅವಧಿಯೊಳಗೆ ಲಿಪ್ಯಂತರ ಮಾಡಲು ಸೂಚಿಸತಕ್ಕದ್ದು.

---

ಸನ್ಮಾನ್ಯ ಸಭಾಧ್ಯಕ್ಷರೆ,

ರಾಜ್ಯದಲ್ಲಿ ಸಾಕ್ಷರತೆಯ ಪ್ರಮಾಣವನ್ನು
ಶೀಘ್ರಗತಿಯಲ್ಲಿ ಹೆಚ್ಚಿಸುವ ಬಗ್ಗೆ ಸರ್ಕಾರ
ಉತ್ಸುಕವಾಗಿದೆ. ವಿದ್ಯಾಭ್ಯಾಸವನ್ನು ಮಧ್ಯದಲ್ಲಿ
1/4 ನಿಲ್ಲಿಸಿಬಿಡುವವರ ಸಂಖ್ಯೆ/ ಹೆಚ್ಚಾಗಿರುವ
ಕಾರಣ, ಸಾಕ್ಷರತೆಯ ಪ್ರಮಾಣವನ್ನು
ಹೆಚ್ಚಿಸುವುದಕ್ಕೆ ಅಡಚಣೆಯಾಗಿದೆ. ಈ
ಸಮಸ್ಯೆಯನ್ನು ಎದುರಿಸಲು ಬೇರೆ
ವಿಧಾನಗಳನ್ನು ನಾವು ಆಲೋಚಿಸಿದ್ದೇವೆ.
1/2 ಸದರಿ ವ್ಯವಸ್ಥೆಯನ್ನು/ ಪ್ರಾರಂಭಿಸುವುದು
ಕಾರ್ಯಗತಗೊಳಿಸುವ ಪ್ರಾಯೋಗಿಕ
ಯೋಜನೆಗಳಲ್ಲಿ ಒಂದಾಗಿದೆ. ಇದರಿಂದ
ಈಗಿರುವ ಸೌಲಭ್ಯಗಳನ್ನೇ ಉಪಯೋಗಿಸಿಕೊಂಡು
3/4 ವಿದ್ಯಾರ್ಥಿಗಳಿಗೆ ಹೆಚ್ಚಿನ ಗಮನ/ನೀಡಲು
ಸಾಧ್ಯವಾಗುತ್ತದೆ. ಬೇರೆ ಬೇರೆ ಔದ್ಯಮಿಕ
ತರಬೇತಿ ಸಂಸ್ಥೆಗಳ ಮುಖೇನ ಬಾಲಕರಿಗೆ
ತರಬೇತಿ ನೀಡಲು ಉದ್ದೇಶಿಸಲಾಗಿದೆ. ಹೀಗೆ
ತರಬೇತಿ ಪಡೆದ ಬಾಲಕರಿಗೆ ಸರ್ಕಾರಿ ಸಾರಿಗೆ
ವಲಯಗಳಲ್ಲಿ ಉದ್ಯೋಗಾವಕಾಶX 1
ಕಲ್ಪಿಸಬಹುದು.

ಪುರಸಭೆಗಳ ಸಹಾಯ ಪಡೆದು ನಗರದ
ಬಡ ಜನರಿಗೆ ನಿವೇಶನಗಳನ್ನು ಹಂಚಲು
ಸರ್ಕಾರವು ಉದ್ದೇಶಿಸಿದೆ. ಪೌರ ಕಾರ್ಮಿಕರಿಗೆ
ಮನೆಗಳನ್ನು/ ಒದಗಿಸುವ ಯೋಜನೆಯನ್ನು 1/4
ರೂಪಿಸಲಾಗುತ್ತಿದೆ. ಪೌರ ಕಾರ್ಮಿಕರಿಗಾಗಿ
ವ್ಯಾಪಕ ಆರೋಗ್ಯ ರಕ್ಷಣಾ ಕಾರ್ಯಕ್ರಮವನ್ನು
ಪ್ರಾರಂಭಿಸಲಾಗುವುದು. ಸಣ್ಣ ಮತ್ತು ಮಧ್ಯಮ
ಪ್ರಮಾಣದ ಕೈಗಾರಿಕೆಗಳಿಗೆ/ ಬೇಕಾಗುವ 1/2

[ Turn over

ನಿರರ್ಥಕ ಮತ್ತು ಚೂರುಪಾರು ಸಾಮಗ್ರಿಗಳನ್ನು
ಸಂಗ್ರಹಿಸಿ ಜೀವನ ನಿರ್ವಹಿಸುವ ಅನೇಕ
ಕುಟುಂಬಗಳಿಗೆ ಮುನ್ನಡೆ ಎಂಬ ಯೋಜನೆಯ
$\frac{3}{4}$ ಮೇರೆಗೆ ಈ ವೃತ್ತಿಯಲ್ಲಿ ನಿರತರಾದವರಿಗೆ/
ನೆರವು ನೀಡಲು ಸಹಕಾರಿ ಸಂಘಗಳನ್ನು
ಸಂಘಟಿಸುವ ಉದ್ದೇಶವಿದೆ. ನಗರ
ಬ್ಯಾಂಕುಗಳಿಗೆ ಈ ಸಹಕಾರಿ ಸಂಘಗಳಿಗೆ ಒತ್ತೆ
ಆಧಾರದ ಸಾಲಗಳನ್ನು ನೀಡಲು ಆದೇಶ
2 ನೀಡಲಾಗುವುದು.X ಹಣ್ಣು ಮತ್ತು ತರಕಾರಿ
ವ್ಯಾಪರಿಗಳಿಗೆ ಶೇಕಡ ಐವತ್ತರಷ್ಟು
ಸಹಾಯಧನ ನೀಡಿ ಕೈಗಾಡಿಗಳನ್ನು
ಒದಗಿಸುವ ಸಾಲ ಯೋಜನೆಯನ್ನು ಕರ್ನಾಟಕ
$\frac{1}{4}$ ರಾಜ್ಯ ಹಣಕಾಸು ನಿಗಮದ/ ಮೂಲಕ
ಪ್ರಾರಂಭಿಸಲಾಗಿರುತ್ತದೆ.

ಪ್ರಾಮಾಣಿಕ ಮತ್ತು ದಕ್ಷ ಆಡಳಿತವನ್ನು
ಒದಗಿಸುವ ನಮ್ಮ ಪ್ರಯತ್ನಗಳನ್ನು ನಮ್ಮ
ರಾಜ್ಯದ ಜನತೆ ಗುರುತಿಸಿದ್ದಾರೆಂದು ನಿಮಗೆ
$\frac{1}{2}$ ತಿಳಿಸಲು ಹರ್ಷಿಸುತ್ತೇನೆ./ ಪ್ರಸಕ್ತ ವರ್ಷ ನಾವು
ಏನನ್ನು ಸಾಧಿಸಬೇಕೆಂದುಕೊಂಡಿದ್ದೇವೋ
ಅದನ್ನು ಸಾಧಿಸಿದ್ದೇವೆ. ಜನತೆಯ ಮನೆ
ಬಾಗಿಲಿಗೇ ಸರ್ಕಾರದ ಸೇವೆಯನ್ನು
ಮುಟ್ಟಿಸಬೇಕೆಂಬ ಸರ್ಕಾರದ ಸಂಕಲ್ಪ
$\frac{3}{4}$ ಗಣನೀಯವಾಗಿ/ ಈಡೇರಿದೆ. ಸಚಿವರು ಮತ್ತು
ಹಿರಿಯ ಅಧಿಕಾರಿಗಳು ಪದೇ ಪದೇ ಕೈಗೊಂಡ
ಪ್ರವಾಸ ಹಾಗೂ ಅನಿರೀಕ್ಷಿತ ಪರಿಶೀಲನೆಗಳ
ನಂತರ ವಿಭಾಗೀಯ ಕೇಂದ್ರಗಳಲ್ಲಿ ಮತ್ತು
3 ಶಿವಮೊಗ್ಗದಲ್ಲಿ ನಡೆದX ಸಚಿವ ಸಂಪುಟದ
ಸಭೆಗಳಲ್ಲಿ ನಮ್ಮ ಜನತೆಯ ಅವಶ್ಯಕತೆಗಳನ್ನು
ಗುರುತಿಸಲಾಯಿತು. ನಮಗೆ ಸಾಧ್ಯವಿರುವಷ್ಟು
ಮಟ್ಟಿಗೆ ಮತ್ತು ನಮ್ಮಲ್ಲಿ ಲಭ್ಯವಿರುವ
ಸಂಪನ್ಮೂಲಗಳನ್ನು ಅವಲಂಬಿಸಿ/ ಜನತೆಯ $\frac{1}{4}$
ಅವಶ್ಯಕತೆಗಳನ್ನು ಪೂರೈಸಲು ಪ್ರಯತ್ನಿಸಿದ್ದೇವೆ.

ವಿಜ್ಞಾನ ಮತ್ತು ತಾಂತ್ರಿಕ ವಿಜ್ಞಾನ
ಇಲಾಖೆಯ ರಚನೆಯನ್ನು ಕುರಿತು
ವಿವರಗಳನ್ನು ನಿಮ್ಮ ಮುಂದಿಡುತ್ತಿದ್ದೇನೆ.
ಸೌರಶಕ್ತಿಯ/ ಕುಕ್ಕರ್, ಮುಂತಾದ $\frac{1}{2}$
ವಾಡಿಕೆಯಲ್ಲದ ಸಾಧನ ಸಲಕರಣೆಗಳಿಗೆ
ಮಾರಾಟ ತೆರಿಗೆಯಿಂದ ಸರ್ಕಾರ
ವಿನಾಯಿತಿ ನೀಡಿದೆ. ಸರ್ಕಾರಿ ಉದ್ಯಮ
ಸಂಸ್ಥೆಗಳಲ್ಲಿ ಶಕ್ತಿ ಸಂರಕ್ಷಣಾ ಕಾರ್ಯವನ್ನು/ $\frac{3}{4}$
ಕೈಗೊಳ್ಳಲಾಗುವುದು. ಹಳೆಯ ಮಾದರಿಯ
ಕೈಪಂಪುಗಳು ಸರಿಯಾಗಿ ಕೆಲಸ ಮಾಡದೆ
ಗ್ರಾಮೀಣ ಜನರಿಗೆ ತೊಂದರೆಯಾಗುತ್ತಿತ್ತು.
ಈ ತೊಂದರೆಯನ್ನು ನಿವಾರಿಸಲು ಕೊರೆ
ಬಾವಿಗಳಿಗೆ ಹೊಸ ವಿನ್ಯಾಸದX ಕೈಪಂಪುಗಳನ್ನು 4
ಕಂಡುಹಿಡಿಯಲಾಗಿದೆ. ಇದೊಂದು
ಮಹತ್ವಪೂರ್ಣ ಹೆಜ್ಜೆ. ನಾವು ಈಗ ಬದಲಿ
ಅರಣ್ಯ ಎಂಬ ಹೊಸ ಕಲ್ಪನೆಯನ್ನು
ರೂಪಿಸಿದ್ದೇವೆ. ಆ ಪ್ರಕಾರ ಒಂದು ಮರವನ್ನು
ಕಡಿದ ಸ್ಥಳದಲ್ಲಿ ಇನ್ನೊಂದು/ ಮರವನ್ನು $\frac{1}{4}$
ಕಡ್ಡಾಯವಾಗಿ ಬೆಳೆಸಲಾಗುವುದು. ವಿಶೇಷವಾಗಿ
ಬೃಹತ್ ಯೋಜನೆಗಳನ್ನು ಕೈಗೊಳ್ಳುವಂತಹ
ಪ್ರದೇಶಗಳಲ್ಲಿ ಮರಗಳನ್ನು ಕಡಿಯಬೇಕಾಗಿ
ಬರಬಹುದು. ಅಂತಹ ಸ್ಥಳಗಳಲ್ಲಿ ಜೀವ/ $\frac{1}{2}$

ಪರಿಸರ ಸಮತೋಲನವನ್ನು ಕಾಪಾಡುವುದಕ್ಕಾಗಿ
ಹೊಸ ಮರಗಳನ್ನು ನಡೆಸಲಾಗುವುದು.
ಮುಂದಿನ ಜನಾಂಗಕ್ಕೆ ಒದಗಬಹುದಾದ
ತೊಂದರೆಗಳನ್ನು ನಿವಾರಿಸುವಲ್ಲಿ ಈ/
$\frac{3}{4}$ ಕಾರ್ಯಕ್ರಮ ಒಂದು ಮಹತ್ವದ ಹೆಜ್ಜೆಯಾಗಿದೆ.
ನಾವು ಈಗ ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿಯನ್ನು
ಸಂರಕ್ಷಿಸುವ ಮತ್ತು ವಿದ್ಯುಚ್ಛಕ್ತಿ ಘಟಕಗಳ
ಕಾರ್ಯ ಸಾಮರ್ಥ್ಯವನ್ನು ಸುಧಾರಿಸುವ
5 ವಿಧಾನಗಳನ್ನುX ಪರಿಶೀಲಿಸುತ್ತಿದ್ದೇವೆ.

ರಾಜ್ಯದ ಕೆಲವು ಪ್ರದೇಶಗಳಲ್ಲಿ ಆಗಾಗ್ಗೆ
ತಲೆದೋರುತ್ತಿರುವ ಕ್ಷಾಮ ಪರಿಸ್ಥಿತಿ ಸರ್ಕಾರಕ್ಕೆ
ತೀವ್ರ ಆತಂಕವನ್ನು ಉಂಟುಮಾಡಿದೆ. ಕ್ಷಾಮ
$\frac{1}{4}$ ಪರಿಸ್ಥಿತಿಯಿಂದ ಉಂಟಾಗುವ/ ಸಂಕಷ್ಟಗಳನ್ನು
ಸಂಪೂರ್ಣವಾಗಿ ನಿವಾರಿಸಲಾಗದಿದ್ದರೂ
ಅವುಗಳನ್ನು ಆದಷ್ಟು ಕಡಿಮೆ ಮಾಡಲು
ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಈ ಅಂಶವನ್ನು
$\frac{1}{2}$ ಗಮನದಲ್ಲಿಟ್ಟುಕೊಂಡು ಕ್ಷಾಮ ಪರಿಸ್ಥಿತಿಗೆ/
ಸಂಬಂಧಪಟ್ಟ ಸಮಸ್ಯೆಗಳನ್ನು ಪರಿಹರಿಸಲು
ಮತ್ತು ಆ ಬಗ್ಗೆ ದೀರ್ಘಾವಧಿ ಪರಿಹಾರ
ಕ್ರಮಗಳನ್ನು ಸೂಚಿಸಲು ಒಂದು ಉನ್ನತ
ಮಟ್ಟದ ಸಮಿತಿಯನ್ನು ರಚಿಸಲಾಗಿರುತ್ತದೆ.
$\frac{3}{4}$ ಈ ಸಮಿತಿಯು/ ತನ್ನ ವರದಿಯನ್ನು ಆರು
ತಿಂಗಳ ಒಳಗಾಗಿ ಸಲ್ಲಿಸುತ್ತದೆ. ಕ್ಷಾಮ
ಪರಿಹಾರಕ್ಕೆ ಸಂಬಂಧಪಟ್ಟಂತೆ ಬರಬಹುದಾದ
ದೂರುಗಳನ್ನು ಆದಷ್ಟು ಕಡಿಮೆ ಮಾಡುವ
6 ಸಲುವಾಗಿ ಹಣ ಸಂದಾಯ ಮಾಡುವX
ಮತ್ತು ಲೆಕ್ಕ ಇಡುವ ಪದ್ಧತಿಯನ್ನು
ಸರಳಗೊಳಿಸಲಾಗಿದೆ ಎಂಬುದನ್ನು ಮಾನ್ಯ
ಸದಸ್ಯರಿಗೆ ತಿಳಿಸಲು ನಾನು ತುಂಬಾ
ಸಂತೋಷಪಡುತ್ತೇನೆ. ಅಲ್ಲದೆ ಕ್ಷಾಮ
ಪರಿಸ್ಥಿತಿಯನ್ನು ನಿಭಾಯಿಸಲು ಕ್ಷಾಮ/ $\frac{1}{4}$
ಆವರಿಸಿದ ಸಂದರ್ಭದಲ್ಲಿ ತೊಳಲಾಡುವ
ಬದಲಿಗೆ ಸರ್ಕಾರದ ಕಂದಾಯ ಇಲಾಖೆ,
ಆಹಾರ ಮತ್ತು ನಾಗರೀಕ ಸರಬರಾಜು
ಇಲಾಖೆಗಳ ಜಂಟಿ ಕಾರ್ಯಾಚರಣೆಯಲ್ಲಿ
ಒಂದು ಉಪ ಸಮಿತಿಯನ್ನು/ ರಚಿಸಲು ಅಗತ್ಯ $\frac{1}{2}$
ಕ್ರಮಗಳನ್ನು ಕೈಗೊಳ್ಳಲಾಗುವುದು. ಸದರಿ
ಸಮಿತಿಗೆ ಮುಖ್ಯಮಂತ್ರಿಗಳ ಬರ ಪರಿಹಾರ
ನಿಧಿಗೆ ಸಂದಾಯವಾಗುವ ಹಣದಲ್ಲಿ
ಉಳಿತಾಯವಾಗುವ/ ಮೊತ್ತವನ್ನು ವರ್ಗಾವಣೆ $\frac{3}{4}$
ಮಾಡಿ ಅಪದ್ಧನ ನಿಧಿಯಾಗಿಡಲಾಗುವುದು.

ಇಷ್ಟು ಹೊತ್ತು ಮಾತನಾಡಲು ಅವಕಾಶ
ಕೊಟ್ಟ ಎಲ್ಲ ಹಿರಿಯರಿಗೆ ವಂದಿಸುತ್ತಾ ನನ್ನ
ಭಾಷಣವನ್ನು ಮುಗಿಸುತ್ತೇನೆ. ಜೈ ಹಿಂದ್,
ಜೈ ಕರ್ನಾಟಕ.X 7

ಮಾನ್ಯ ಜಿಲ್ಲಾಧಿಕಾರಿಗಳಿಗೆ, ಮಂಡ್ಯ ಜಿಲ್ಲೆ,
ಮಂಡ್ಯ.

ಮಾನ್ಯರೆ,

ಇತ್ತೀಚಿನ ಪರಿವೀಕ್ಷಣೆಯ ಸಮಯದಲ್ಲಿ
ಹಲವು ಕಛೇರಿಗಳ ಆಡಳಿತ ವ್ಯವಸ್ಥಿತ
ರೀತಿಯಲ್ಲಿ ನಡೆಯುತ್ತಿಲ್ಲದಿರುವುದು ನಮ್ಮ/ $\frac{1}{4}$
ಗಮನಕ್ಕೆ ಬಂದಿರುತ್ತದೆ. ಸರ್ಕಾರಿ
ಆಡಳಿತವನ್ನು ಮೂಲತಃ ಗ್ರಾಮೀಣ

ಮಟ್ಟದಿಂದಲೇ ಚುರುಕುಗೊಳಿಸಲು
ಸಾರ್ವಜನಿಕರ ಸಂಪರ್ಕ ಉಳ್ಳಂತಹ ಕಂದಾಯ
$\frac{1}{2}$ ಅಧಿಕಾರಿ, ಸಿಬ್ಬಂದಿ ವರ್ಗದವರ/ ಸೇವೆಯನ್ನು
ಉಪಯೋಗಿಸಿಕೊಳ್ಳುವುದು ಸೂಕ್ತವಾಗಿದೆ.
ಅಂತೆಯೇ ಸಾರ್ವಜನಿಕರ ಕುಂದುಕೊರತೆಗಳು,
ಸಮಸ್ಯೆಗಳು ಹಾಗೂ ಇತರೇ ಅಗತ್ಯಗಳ ವರದಿ
$\frac{3}{4}$ ಮಾಡುವ ವಿಷಯದಲ್ಲಿ ಗ್ರಾಮ ಲೆಕ್ಕಿಗರ/ ಮತ್ತು
ಕೃಷಿ ಸಹಾಯಕರ ಸೇವೆಯನ್ನು ಸದುಪಯೋಗ
ಪಡಿಸಿಕೊಳ್ಳುವುದು ಅತ್ಯಗತ್ಯವಾಗಿರುತ್ತದೆಂದು
ಹೇಳಲಿಚ್ಛಿಸುತ್ತೇನೆ.

ಆದುದರಿಂದ ತಾವು ತಮ್ಮ ಅಧಿಕಾರ
8 ವ್ಯಾಪ್ತಿಯಲ್ಲಿ ಇರತಕ್ಕ ಎಲ್ಲಾX ತಾಲ್ಲೂಕುಗಳ
ಅಧಿಕಾರಿಗಳಿಗೆ ತಿಳುವಳಿಕೆ ನೀಡಿ, ಎಲ್ಲಾ ಗ್ರಾಮ
ಲೆಕ್ಕಿಗರು, ಕೃಷಿ ಸಹಾಯಕರು, ತಮ್ಮ ಗ್ರಾಮ
ವ್ಯಾಪ್ತಿಯ ಗ್ರಾಮಸ್ಥರ ಕುಂದು ಕೊರತೆಗಳು,
$\frac{1}{4}$ ಸಮಸ್ಯೆಗಳ ವಿವರಣೆಗಳೊಂದಿಗೆ/ ದ್ವಿಪ್ರತಿಯಲ್ಲಿ
ಪಟ್ಟಿಯನ್ನು ತಯಾರಿಸಿ ಅವರುಗಳು ತಾಲ್ಲೂಕು
ಕಛೇರಿ, ಕ್ಷೇತ್ರಾಭಿವೃದ್ಧಿ ಕಛೇರಿಗಳಲ್ಲಿ ಮಾಸಿಕ
ಸಭೆಗಳಲ್ಲಿ ಭಾಗವಹಿಸುವ ದಿನದಂದು ಆ
$\frac{1}{2}$ ಪಟ್ಟಿಗಳನ್ನು ತಹಶೀಲ್ದಾರ್‌ರವರಿಗೂ/
ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೂ ಕೊಟ್ಟು
ಅವುಗಳನ್ನು ವಿಷಯುವಾರು ವಿಂಗಡಿಸಿ
ಕಂದಾಯ ಇಲಾಖೆಯ ವಿಷಯವಾದಲ್ಲಿ
ತಹಶೀಲ್ದಾರರವರೂ ಅಭಿವೃದ್ದಿ ವಿಷಯವಾದಲ್ಲಿ
ಕ್ಷೇತ್ರಾಭಿವೃದ್ಧಿ/ ಅಧಿಕಾರಿಗಳೂ ಸೂಕ್ತಕ್ರಮ $\frac{3}{4}$
ತೆಗೆದುಕೊಳ್ಳುವುದು. ಅವುಗಳಲ್ಲಿ ಅತೀ
ಜರೂರಾದಂತಹ ಪ್ರಕರಣಗಳು ಇದ್ದಲ್ಲಿ ಅವುಗಳ
ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳುವುದು.
ಇವುಗಳಲ್ಲಿ ಅಂತಹX ಪ್ರಕರಣಗಳು ಉನ್ನತ 9
ಅಧಿಕಾರಿಗಳ ಅಧಿಕಾರ ವ್ಯಾಪ್ತಿಗೆ ಸೇರಿದ್ದಲ್ಲಿ
ತಕ್ಷಣ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ
ತರಬೇಕು. ಹಾಗೆ ಗಮನಕ್ಕೆ ಬಂದ ಸಂಬಂಧಿಸಿದ
ಸಾರ್ವಜನಿಕರ/ ಸಮಸ್ಯೆಗಳ, ಕುಂದು $\frac{1}{4}$
ಕೊರತೆಗಳ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು
ಬಗೆಹರಿಸತಕ್ಕದ್ದು. ಈ ಒಂದು ಆಡಳಿತ
ಕ್ರಮವನ್ನು ಅನುಸರಿಸಿ ಪ್ರಾಥಮಿಕವಾಗಿ ಗ್ರಾಮ
ಲೆಕ್ಕಿಗರಿಗೂ, ಕೃಷಿ/ ಸಹಾಯಕರುಗಳಿಗೂ $\frac{1}{2}$
ಜವಾಬ್ದಾರಿ ವಹಿಸಿ ಕಂದಾಯ ಇಲಾಖೆ ಮತ್ತು
ಸರ್ಕಾರಿ ಆಡಳಿತವನ್ನು ಚುರುಕುಗೊಳಿಸಬೇಕು.

ಮೇಲೆ ತಿಳಿಸಿರುವ ಪ್ರಕಾರ ತಾವು ತಮ್ಮ
ಅಧೀನ ಅಧಿಕಾರಿಗಳು ಮತ್ತು/ ಸಿಬ್ಬಂದಿ $\frac{3}{4}$
ವರ್ಗದವರಿಗೆ ಒಂದು ಸುತ್ತೋಲೆಯನ್ನು
ಹೊರಡಿಸಿ ಕ್ರಮ ತೆಗೆದುಕೊಂಡು ನಮ್ಮ
ಕಛೇರಿಗೆ ವರದಿ ಸಲ್ಲಿಸಬೇಕೆಂದು ತಮ್ಮಲ್ಲಿ
ಕೋರುತ್ತೇನೆ.

ತಮ್ಮ ವಿಶ್ವಾಸಿ,
ವಲಯ ಆಯುಕ್ತರು, ಬೆಂಗಳೂರು ವಲಯ.X 10